# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ವಿದ್ಯಾರಣ್ಯ-೫೮೩ ೨೭೬

### ಆಗಸ್ಟ್ ೦೪, ೨೦೨೨ರ ಗುರುವಾರದಂದು ನಡೆದ ಕಾರ್ಯಕಾರಿ ಸಮಿತಿ ೨೧೩ನೇ ಸಭೆಯ ಪರಿಷ್ಕೃತ ನಡೆವಳಿಗಳು

| | |
|---|---|
| ೦೧. ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು, ಕವಿಹಂ | : ಅಧ್ಯಕ್ಷರು |
| ೦೨. ಪ್ರೊ. ಹೆಚ್.ಎಸ್. ರಘುನಾಥ, ಶಿವಮೊಗ್ಗ | : ಸದಸ್ಯರು |
| ೦೩. ಪ್ರೊ. ಜಿ.ಸಿ. ರಾಜಣ್ಣ, ಮೈಸೂರು | : ಸದಸ್ಯರು |
| ೦೪. ಶ್ರೀಮತಿ ನಯನಾ ಎಸ್., ಬೆಂಗಳೂರು | : ಸದಸ್ಯರು |
| ೦೫. ಶ್ರೀ ಪ್ರಶಾಂತ್ ಭೀಮಯ್ಯ, ಮಡಿಕೇರಿ | : ಸದಸ್ಯರು |
| ೦೬. ಶ್ರೀ ಜೈಭೀಮ್ ಆರ್.ಕಟ್ಟಿ, ಕಲಬುರಗಿ | : ಸದಸ್ಯರು |
| ೦೭. ಡಾ. ಓ. ಓಬಯ್ಯ, ಬೆಂಗಳೂರು | : ಸದಸ್ಯರು |
| ೦೮. ಶ್ರೀ ಸಮಿಉಲ್ಲಾ ಖಾನ್, ಬೆಂಗಳೂರು | : ಸದಸ್ಯರು |
| ೦೯. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೧೦. ಡಾ. ಸಿ.ಎಸ್. ವಾಸುದೇವನ್, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೧. ಡಾ. ಕೆ.ರವೀಂದ್ರನಾಥ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೧೨. ಡಾ. ಮಾಧವ ಪೆರಾಜೆ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೩. ಡಾ. ರಮೇಶ ನಾಯಕ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೧೪. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಪ್ರೊ. ಹೆಚ್.ಎಂ. ಚನ್ನಪ್ಪಗೋಳ, ಬೆಳಗಾವಿ | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೫. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೬. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |

ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಆರಂಭದಲ್ಲಿ ಸಭೆಗೆ ಸ್ವಾಗತಿಸಿದರು. ನೂತನವಾಗಿ ನಿಯೋಜನೆಗೊಂಡ ಭಾಷಾ ನಿಕಾಯದ ಡೀನ್ ಡಾ.ಎಫ್.ಟಿ. ಹಳ್ಳಿಕೇರಿ ಅವರನ್ನು ಸಭೆಯು ಅಭಿನಂದಿಸಿತು. ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೦೭.೦೫.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೨ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೦೭.೦೫.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿ ೨೧೨ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೦೭.೦೫.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೨ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

**ನಿರ್ಣಯ** : ದಿನಾಂಕ ೦೭.೦೫.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೨ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

೨೧೩.೦೧ ಹೊಸಪೇಟೆ ತಹಶೀಲ್ದಾರ್ ಅವರು ದಿನಾಂಕ ೦೩.೦೬.೨೦೨೨ರ ಪತ್ರದ ಮೂಲಕ ರೈತ ಸಂಪರ್ಕ ಕೇಂದ್ರ ಕಟ್ಟಡ ನಿರ್ಮಾಣ ಮಾಡಲು ಕನ್ನಡ ವಿಶ್ವವಿದ್ಯಾಲಯದ ಸ್ವಾಧೀನದಲ್ಲಿರುವ ಜಮೀನನ್ನು ನೀಡಲು ಕೋರಿರುವ ಬಗ್ಗೆ.

ಟಿಪ್ಪಣಿ : ಹೊಸಪೇಟೆ ತಹಶೀಲ್ದಾರ್ ಅವರು ದಿನಾಂಕ ೦೩.೦೬.೨೦೨೨ರಂದು ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ ಕಮಲಾಪುರ ಗ್ರಾಮದ ಕನ್ನಡ ವಿಶ್ವವಿದ್ಯಾಲಯದ ಸ್ವಾಧೀನದಲ್ಲಿರುವ ಸ.ನಂ. ೮೭೫ರ ಪೈಕಿ ವಿಸ್ತೀರ್ಣ ೧೦.೦೭ ಎಕರೆ ಪೈಕಿ ವಿಸ್ತೀರ್ಣ ೦.೫೦ ಸೆಂಟ್ಸ್ ಜಮೀನನ್ನು ರೈತ ಸಂಪರ್ಕ ಕೇಂದ್ರ ಕಟ್ಟಡ ನಿರ್ಮಾಣ ಮಾಡಲು ಮಂಜೂರು ಮಾಡುವಂತೆ ಕೋರಿ ಬರೆದಿರುವ ಪತ್ರದ ಕುರಿತು ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳಲು ಕಾರ್ಯಕಾರಿ ಸಮಿತಿ ಸಭೆಗೆ ಮಂಡಿಸಲಾಗಿದೆ.

ನಿರ್ಣಯ : ಪ್ರಸ್ತುತ ವಿಷಯವನ್ನು ಪರಿಶೀಲಿಸಿದ ಕಾರ್ಯಕಾರಿ ಸಮಿತಿ ಸಭೆಯು ಸದರಿ ರೈತ ಸಂಪರ್ಕ ಕೇಂದ್ರಕ್ಕೆ ಕನ್ನಡ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಜಮೀನನ್ನು ಬಿಟ್ಟುಕೊಡಲು (ತಾಂತ್ರಿಕ ತೊಡಕುಗಳಿಂದ) ಸಾಧ್ಯವಾಗದು ಎಂದು ತಹಶೀಲ್ದಾರರಿಗೆ ಪತ್ರ ಬರೆದು ತಿಳಿಸಲು ತೀರ್ಮಾನಿಸಿತು.

೨೧೩.೦೨ ಡಾ.ಸಿ.ಟಿ. ಗುರುಪ್ರಸಾದ್, ಪ್ರಾಧ್ಯಾಪಕರು ಜಾನಪದ ಅಧ್ಯಯನ ವಿಭಾಗ ಇವರು ಸರ್ಕಾರದ ಆದೇಶದಂತೆ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಸಚಿವ(ಆಡಳಿತ) ಹುದ್ದೆಗೆ ನಿಯೋಜನೆಗೊಂಡ ಹಿನ್ನೆಲೆಯಲ್ಲಿ ಸದರಿಯವರನ್ನು ಸೇವೆಯಿಂದ ಬಿಡುಗಡೆಗೊಳಿಸಿರುವ ಬಗ್ಗೆ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ಕೋರಿದೆ.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ಸಿ.ಟಿ. ಗುರುಪ್ರಸಾದ್ ಇವರು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಅಧಿಸೂಚನೆ ಸಂಖ್ಯೆ: ಇಡಿ ೬೮ ಯುಎನ್ಇ ೨೦೨೨, ದಿನಾಂಕ ೦೮.೦೪.೨೦೨೨ರಂತೆ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಸಚಿವ (ಆಡಳಿತ) ಹುದ್ದೆಗೆ ನಿಯೋಜನೆಗೊಂಡಿರುತ್ತಾರೆ. ಸದರಿಯವರ ಬೇಡಿಕೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯ ಹಿನ್ನೆಲೆಯಲ್ಲಿ ಕಾರ್ಯಕಾರಿ ಸಮಿತಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ನಿಯೋಜನೆ ಮೇರೆಗೆ ಬಿಡುಗಡೆಗೊಳಿಸಲಾಗಿದೆ. ಸದರಿ ಕ್ರಮಕ್ಕೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಸದರಿಯವರನ್ನು ಪ್ರತಿ ನಿಯೋಜನೆ ಮೇರೆಗೆ ಬಿಡುಗಡೆಗೊಳಿಸಲಾದ ಕ್ರಮಕ್ಕೆ ಘಟನೋತ್ತರ ಅನುಮೋದನೆಯನ್ನು ನೀಡಿತು.

೨೧೩.೦೩ ಶ್ರೀ ಸುಹಾಸ್ ಎಸ್, ಸಹಾಯಕ ಗ್ರಂಥಪಾಲಕ ಇವರು ಸ್ವಯಂ ನಿವೃತ್ತಿ ಕೋರಿರುವ ಬಗ್ಗೆ.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ಅಕ್ಷರ ಗ್ರಂಥಾಲಯದಲ್ಲಿ ಸಹಾಯಕ ಗ್ರಂಥಪಾಲಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಸುಹಾಸ್ ಎಸ್. ಅವರು ಕನ್ನಡ ವಿಶ್ವವಿದ್ಯಾಲಯದ ಪರಿನಿಯಮದಡಿಯಲ್ಲಿ ಬರುವ ಸೇವಾ ನಿಯಮಗಳ ಕ್ರಮ ಸಂಖ್ಯೆ ೧೮(ಇ) ಪ್ರಕಾರ ಸ್ವಯಂ ನಿವೃತ್ತಿ ಕೋರಿ ದಿನಾಂಕ ೨೮.೦೪.೨೦೨೨ರಂದು ಮನವಿಯನ್ನು ಸಲ್ಲಿಸಿರುತ್ತಾರೆ. ದಿನಾಂಕ ೧೮.೦೭.೨೦೨೨ರ ಮಾನ್ಯ ಕುಲಸಚಿವರ ಕಚೇರಿ ಟಿಪ್ಪಣಿ ಪ್ರಕಾರ ಸ್ವಯಂ ನಿವೃತ್ತಿ ಕುರಿತು ಮಾನ್ಯ ಕುಲಸಚಿವರ ಸಮ್ಮುಖದಲ್ಲಿ ಮೌಖಿಕ ಹೇಳಿಕೆಯನ್ನು ನೀಡಿ ಲಿಖಿತ ದಾಖಲೆಯನ್ನು ಸಲ್ಲಿಸಿರುತ್ತಾರೆ. ಮೌಖಿಕ ಹೇಳಿಕೆಯ ಲಿಖಿತ ದಾಖಲೆಯ ಪ್ರಕಾರ ಸದರಿಯವರನ್ನು ಸ್ವಯಂ ನಿವೃತ್ತಿಗೊಳಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ನಿಯಮಾನುಸಾರ ಸ್ವಯಂ ನಿವೃತ್ತಿಗೆ ಕ್ರಮವಹಿಸಲು ಅನುಮೋದನೆ ನೀಡಿತು.

೨೧೩.೦೪ ೩೧ನೇ ನುಡಿಹಬ್ಬದ ಪ್ರಕ್ರಿಯೆಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕುರಿತು.

ನಿರ್ಣಯ : ನಿಯಮಾನುಸಾರ ೩೧ನೇ ನುಡಿಹಬ್ಬದ ಪ್ರಕ್ರಿಯೆಗಳನ್ನು ಆರಂಭಿಸಲು ಸಭೆ ಅನುಮೋದನೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೨೧೩.೦೫ ನುಡಿಹಬ್ಬ ೩೧ರ ಘಟಿಕೋತ್ಸವದ ಭಾಷಣಕಾರರನ್ನು ಆಹ್ವಾನಿಸುವ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ೩೧ನೇ ನುಡಿಹಬ್ಬ/ಘಟಿಕೋತ್ಸವ ಭಾಷಣಕಾರನ್ನಾಗಿ (ಮುಖ್ಯಅತಿಥಿ) ಡಾ.ಡಿ. ವೀರೇಂದ್ರ ಹೆಗ್ಗಡೆ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಹಾಗೂ ಡಾ. ಶ್ರೀನಿವಾಸ ವರ್ಕೆಡಿ ಇವರುಗಳಲ್ಲಿ ಒಬ್ಬರನ್ನು ಆಯ್ಕೆ ಮಾಡುವಂತೆ ಘನತೆವೆತ್ತ ಕುಲಾಧಿಪತಿಗಳನ್ನು ಕೋರಲು ನಿರ್ಣಯಿಸಿತು.

೨೧೩.೦೬ ನುಡಿಹಬ್ಬ ೩೧ರ ನಾಡೋಜ ಆಯ್ಕೆ ಸಮಿತಿಗೆ ಕನ್ನಡ ವಿಶ್ವವಿದ್ಯಾಲಯದ ಪ್ರತಿನಿಧಿಯೊಬ್ಬರನ್ನು ನಾಮನಿರ್ದೇಶನ ಮಾಡುವ ಕುರಿತು.

ನಿರ್ಣಯ : ೩೧ನೇ ನುಡಿಹಬ್ಬದ ನಾಡೋಜ ಆಯ್ಕೆ ಸಮಿತಿಗೆ ಡಾ. ಕೆ.ಇ. ದೇವನಾಥನ್, ಪ್ರೊ. ಜೋಗನ್ ಶಂಕರ್ ಹಾಗೂ ಡಾ ಕಾವೇರಿಯಪ್ಪ ಇವರುಗಳ ಪೈಕಿ ಒಬ್ಬರನ್ನು ವಿಶ್ವವಿದ್ಯಾಲಯದ ಪ್ರತಿನಿಧಿ/ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲು ಸಭೆ ಅನುಮೋದನೆ ನೀಡಿತು.

೨೧೩.೦೭ ಕನ್ನಡ ವಿಶ್ವವಿದ್ಯಾಲಯದ ೩೧ನೇ ನುಡಿಹಬ್ಬದಲ್ಲಿ ನಾಡೋಜ ಗೌರವ ಪದವಿಗೆ ಪರಿಗಣಿಸಬಹುದಾದ ಸಾಧಕರ ಪಟ್ಟಿಯನ್ನು ಅಂತಿಮಗೊಳಿಸಿ, ನಾಡೋಜ ಆಯ್ಕೆ ಸಮಿತಿಗೆ ಸಲ್ಲಿಸುವ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ, ಈ ಕೆಳಗಿನ ೧೦ ಮಂದಿ ಸಾಧಕರ ಪಟ್ಟಿಯನ್ನು ನಾಡೋಜ ಆಯ್ಕೆ ಸಮಿತಿಗೆ ಸಲ್ಲಿಸಲು ತೀರ್ಮಾನಿಸಿ ಶಿಫಾರಸ್ಸು ಮಾಡಿತು.

೧. ಡಾ. ಜಿ. ಕೃಷ್ಣಪ್ಪ – ಸಾಹಿತ್ಯ

೨. ಡಾ. ಎಸ್.ಸಿ. ಶರ್ಮಾ – ಶಿಕ್ಷಣ ತಂತ್ರಜ್ಞಾನ ಮತ್ತು ಸಂಗೀತ

೩. ಡಾ. ಅಂಬಣ್ಣ – ವೈದ್ಯಕೀಯ
೪. ಪ್ರೊ. ಮಲೆಯೂರು ಗುರುಸ್ವಾಮಿ – ಸಾಹಿತ್ಯ
೫. ಡಾ. ಆರ್ವಿಯಸ್ ಸುಂದರಂ – ಸಾಹಿತ್ಯ
೬. ಶ್ರೀಮತಿ ಪಾರ್ವತಿ ಜಿ. ಐತಾಳ್ – ಅನುವಾದ ಸಾಹಿತ್ಯ
೭. ಶ್ರೀ ಎಸ್.ವಿ. ಸುನೀಲ್ – ಕ್ರೀಡೆ
೮. ಶ್ರೀ ನಾ. ಡಿಸೋಜಾ – ಸಾಹಿತ್ಯ
೯. ಡಾ. ಎಸ್.ಹೆಚ್. ಕಟ್ಟಿ – ವೈದ್ಯಕೀಯ
೧೦. ಡಾ. ಶಿವಾನಂದ ನಾಯಕ – ಶಿಕ್ಷಣ, ವೈದ್ಯಕೀಯ ಮತ್ತು ಸಾಮಾಜಿಕ

**೨೧೩.೦೮** ದಿನಾಂಕ ೦೨.೦೮.೨೦೨೨ರಂದು ನಡೆದ ೨೦೨೧–೨೨ನೇ ಸಾಲಿನ ಮೂರನೇ ಮತ್ತು ನಾಲ್ಕನೇ ತ್ರೈಮಾಸಿಕ ಅವಧಿಯ ಹಣಕಾಸು ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

**ನಿರ್ಣಯ :** ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೧೩.೦೯** ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ೨೦೧೫–೧೬ ಮತ್ತು ೨೦೧೬–೧೭ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ಅವ್ಯವಹಾರಗಳ ಬಗ್ಗೆ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಬರೆದಿರುವ ಕ್ರಮಾಂಕ: ಇಡಿ ೨೮ ಕೆವಿವಿ ೨೦೧೬ ದಿನಾಂಕ ೧೫.೦೭.೨೦೨೨ರ ಪತ್ರದ ಕುರಿತು.

**ನಿರ್ಣಯ :** ಈ ಸಂಬಂಧದ ಎಲ್ಲಾ ವಿಷಯಗಳನ್ನು ಚರ್ಚಿಸಿದ ಸಭೆಯು, ಸರ್ಕಾರದ ಪತ್ರದಲ್ಲಿನ ವರದಿಗಳಲ್ಲಿ ಪ್ರಸ್ತಾಪಿಸಿರುವ ಸರ್ಕಾರದ ನಿಯಮಗಳು ಮತ್ತು ಆದೇಶಗಳ ಉಲ್ಲಂಘನೆ ವಿಷಯಗಳ ಕುರಿತು ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು, ಸೂಕ್ತ ಕಾನೂನು ಪ್ರಕ್ರಿಯೆಗಳನ್ನು ಕೈಗೊಳ್ಳಲು ತೀರ್ಮಾನಿಸಿತು.

**೨೧೩.೧೦** ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಸಂಖ್ಯೆ : ಇಡಿ ೩೦೯ ಯುಎನ್ಇ ೨೦೨೧ ದಿನಾಂಕ ೨೬.೦೭.೨೦೨೨ರ ಪತ್ರದೊಂದಿಗೆ ಕಳುಹಿಸಿರುವ ಮಾದರಿ ಪರಿನಿಯಮಗಳನ್ವಯ ಕನ್ನಡ ವಿಶ್ವವಿದ್ಯಾಲಯದಲ್ಲಿನ ಬೋಧಕ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ನಿರ್ದೇಶಿಸಿರುವ ಕುರಿತು.

**ಟಿಪ್ಪಣಿ :** ಯುಜಿಸಿ ನಿಯಮಾವಳಿಗಳು ೨೦೧೮ರ ಆಧಾರದ ಮೇಲೆ ಮಾದರಿ ಪರಿನಿಯಮಗಳನ್ವಯ ಕನ್ನಡ ವಿಶ್ವವಿದ್ಯಾಲಯದಲ್ಲಿನ ಬೋಧಕ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ನಿರ್ದೇಶಿಸಿರುತ್ತದೆ. ಸರ್ಕಾರದ ನಿರ್ದೇಶನದಂತೆ ಮುಂದಿನ ಪ್ರಕ್ರಿಯೆ ಮತ್ತು ಕ್ರಮಗಳನ್ನು ಕೈಗೊಳ್ಳಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

**ನಿರ್ಣಯ :** ಸದರಿ ಅಂಶಗಳನ್ನು ಸಭೆಯು ಪರಿಶೀಲಿಸಿ, ಸರ್ಕಾರದ ಮಾದರಿ ಪರಿನಿಯಮಗಳಿಗೆ ಅನುಮೋದನೆ ನೀಡಿತು.

**೨೧೩.೧೧** ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವ ಕುರಿತು.

**ಟಿಪ್ಪಣಿ :** ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಪತ್ರ ಸಂಖ್ಯೆ ಇಡಿ ೦೫, ಯುಎನ್ಇ ೨೦೨೨, ದಿನಾಂಕ ೧೧.೦೮.೨೦೨೨ರ ಪತ್ರದ ಮೂಲಕ ಉನ್ನತ ಶಿಕ್ಷಣ ಇಲಾಖೆಯು ವಿಶ್ವವಿದ್ಯಾಲಯಗಳಲ್ಲಿ ಖಾಲಿಯಿರುವ ಕಲ್ಯಾಣ ಕರ್ನಾಟಕ ಭಾಗದ ಬೋಧಕೇತರ ಹುದ್ದೆಗಳನ್ನು ಅರ್ಹತೆಯನುಸಾರ ಸಂಬಂಧಿಸಿದ ನಿಯಮಗಳನ್ವಯ ಪಾರದರ್ಶಕವಾಗಿ ಭರ್ತಿಮಾಡಲು ಅನುಮತಿ ನೀಡಿದೆ. ಈ ಕುರಿತಂತೆ ನಿಯಮಾನುಸಾರ ಪ್ರಕ್ರಿಯೆಯನ್ನು ಕೈಗೊಳ್ಳಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

**ನಿರ್ಣಯ :** ಸದರಿ ಅಂಶಗಳನ್ನು ಸಭೆಯು ಪರಿಶೀಲಿಸಿ ಸರ್ಕಾರದ ನಿರ್ದೇಶನದನ್ವಯ ೩೭೧(ಜೆ)ರಡಿಯ ಸ್ಥಳೀಯ ವೃಂದದ ಕೆಳಕಂಡ ರಿಕ್ತ ಬೋಧಕೇತರ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಅನುಮೋದನೆ ನೀಡಿತು.

**ಯುಜಿಸಿ ವೇತನ ಶ್ರೇಣಿ ಹುದ್ದೆಗಳು**

೧. ನಿರ್ದೇಶಕರು ವಸ್ತುಸಂಗ್ರಹಾಲಯ – ೧
೨. ಮುಖ್ಯ ಗ್ರಂಥಪಾಲಕರು – ೧
೩. ಸಹಾಯಕ ಗ್ರಂಥಪಾಲಕರು – ೧

**ರಾಜ್ಯ ವೇತನ ಶ್ರೇಣಿ ಹುದ್ದೆಗಳು**

೧. ಸಾರ್ವಜನಿಕ ಸಂಪರ್ಕಾಧಿಕಾರಿ – ೧
೨. ಗ್ರಂಥಾಲಯ ತಾಂತ್ರಿಕ ಸಹಾಯಕ – ೧
೩. ಪ್ರಕಟಣಾ ಸಹಾಯಕರು – ೧

೪. ವಿನ್ಯಾಸ ಕಲಾವಿದರು – ೧
೫. ಎಲೆಕ್ಟ್ರಿಷಿಯನ್ – ೧

ಹಾಗೆಯೇ ಸರ್ಕಾರದ ಅನುಮೋದನೆ ಪಡೆದುಕೊಂಡು ರಾಜ್ಯ ವೇತನ ಶ್ರೇಣಿಯ ಕೆಳಕಂಡ ಮಿಕ್ಕುಳಿದ ವೃಂದದ ರಿಕ್ತ ಹುದ್ದೆಗಳನ್ನು ಭರ್ತಿಮಾಡಲು ಕಾರ್ಯಕಾರಿ ಸಮಿತಿ ಸಭೆಯು ಅನುಮೋದನೆ ನೀಡಿತು.

೧. ಗ್ರಂಥಾಲಯ ಸಹಾಯಕ – ೧
೨. ಫೋಟೋಗ್ರಾಫರ್ – ೧
೩. ಬೈಂಡರ್ – ೧

೨೧೩.೧೨ ಸಹಾಯಕ ಗ್ರಂಥಪಾಲಕರ ಸೇವಾಪೂರ್ವ ಅವಧಿ ಘೋಷಣೆ ಬಗ್ಗೆ ದಿನಾಂಕ ೨೬.೦೭.೨೦೨೨ರಂದು ನಡೆದ ಸಭೆಯ ನಡಾವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದಲ್ಲಿ ದಿನಾಂಕ ೨೭.೦೩.೨೦೧೮ರಿಂದ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಶ್ರೀ ಶಂಕರಗೌಡ ಎಸ್. ಗುಂಡಕನಾಳ, ಸಹಾಯಕ ಗ್ರಂಥಪಾಲಕರು ಇವರು ಸಲ್ಲಿಸಿದ ಕಾರ್ಯವರದಿ ಮತ್ತು ದಾಖಲೆಗಳನ್ನು ಸೇವಾಪೂರ್ವ ಅವಧಿ ಘೋಷಣೆ ಸಂಬಂಧದ ಪರಿಶೀಲನಾ ಸಮಿತಿಯು ಪರಿಶೀಲಿಸಿತು. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂ. ಕ್ರಮಾಂಕ ಇಡಿ ೨೦ ಕೆವಿವಿ ೨೦೧೯, ದಿನಾಂಕ ೧೦.೦೧.೨೦೨೨ ಮತ್ತು ೨೪.೦೩.೨೦೨೨ರ ತತ್ಪರಿಣಾಮಗಳ ಷರತ್ತಿಗೊಳಪಟ್ಟು ನಿಯಮಾನುಸಾರ ಸೇವಾಪೂರ್ವ ಅವಧಿಯನ್ನು ಘೋಷಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

**ನಿರ್ಣಯ :** ಸದರಿ ವಿಷಯವನ್ನು ಸಭೆಯು ಸುಧೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ನಿರ್ಣಯಿಸಿತು.

೨೦೧೭-೧೮ನೇ ಸಾಲಿನ ನೇಮಕಾತಿ ಪ್ರಕ್ರಿಯೆಗಳ ಪರಿಶೀಲನಾ ಸಮಿತಿ ವರದಿಯಲ್ಲಿನ ಅಂಶಗಳ ಹಾಗೂ ಸರ್ಕಾರದ ದಿನಾಂಕ ೧೦.೦೧.೨೦೨೨ ಮತ್ತು ೨೪.೦೩.೨೦೨೨ರ ಪತ್ರಗಳಲ್ಲಿನ ಅಂಶಗಳ ತತ್ಪರಿಣಾಮಗಳಿಗೆ ಒಳಪಟ್ಟು ಹಾಗೂ ದಿನಾಂಕ ೨೭.೦೩.೨೦೧೮ರ ಆಯಾ ಅಭ್ಯರ್ಥಿಗಳ ಆದೇಶಗಳ ನೇಮಕಾತಿಗೆ ಘನತೆವೆತ್ತ ರಾಜ್ಯಪಾಲರು ಅನುಮೋದನೆ ನೀಡಿದ ನಂತರದಲ್ಲಷ್ಟೇ ಅಭ್ಯರ್ಥಿಗೆ ಸೇವಾ ಸೌಲಭ್ಯಗಳು ಮತ್ತು ಆರ್ಥಿಕ ಸೌಲಭ್ಯಗಳು ವಿಸ್ತರಿಸಲ್ಪಡುವ ಷರತ್ತಿಗೊಳಪಟ್ಟು, ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಶಂಕರಗೌಡ ಎಸ್. ಗುಂಡಕನಾಳ, ಸಹಾಯಕ ಗ್ರಂಥಪಾಲಕರು ಇವರ ಸೇವಾಪೂರ್ವ ಅವಧಿಯು ತೃಪ್ತಿಕರವಾಗಿದೆ ಎಂದು ಘೋಷಿಸಲು ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

೨೧೩.೧೩ ಅನುಚ್ಛೇದ ೩೭೧(ಜೆ)ರಡಿ ನೇರನೇಮಕಾತಿಗೊಂಡಿರುವ ಬೋಧಕೇತರ ಸಿಬ್ಬಂದಿಗಳ ಸೇವಾಪೂರ್ವ ಅವಧಿ ಘೋಷಣೆ ಬಗ್ಗೆ ದಿನಾಂಕ ೩೦.೦೭.೨೦೨೨ರಂದು ನಡೆದ ಸಭೆಯ ನಡಾವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕುರಿತು.

**ನಿರ್ಣಯ :** ಅನುಚ್ಛೇದ ೩೭೧(ಜೆ)ರಡಿ ನೇರನೇಮಕಾತಿಗೊಂಡಿರುವ ಬೋಧಕೇತರ ಸಿಬ್ಬಂದಿಗಳ ಸೇವಾಪೂರ್ವ ಅವಧಿ ಘೋಷಣೆ ಬಗ್ಗೆ ದಿನಾಂಕ ೩೦.೦೭.೨೦೨೨ರಂದು ನಡೆದ ಸಭೆಯ ನಡಾವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ನೀಡಿತು.

೨೧೩.೧೪ ಬೋಧಕೇತರ ಸಿಬ್ಬಂದಿಗಳ ಸೇವಾಪೂರ್ವ ಅವಧಿ ಘೋಷಣೆ ಕುರಿತು ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿ.

ಟಿಪ್ಪಣಿ : ೨೦೧೭-೧೮ನೇ ಸಾಲಿನಲ್ಲಿ ೩೭೧(ಜೆ) ಸ್ಥಳೀಯ ವೃಂದದಲ್ಲಿ ನೇಮಕಗೊಂಡ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಆದೇಶವು **ಸರ್ಕಾರದ ಪತ್ರ ಸಂಖ್ಯೆ ಇಡಿ ೫೭೨ ಯುಎನ್ಇ ೨೦೧೪ ದಿನಾಂಕ ೨೭.೦೯.೨೦೧೭ರನ್ವಯ ಕುಲಾಧಿಪತಿಗಳ ಅನುಮೋದನೆ ನಂತರವೇ ಸಿಂಧುಗೊಳ್ಳುವುದು** ಎಂದು ವಿಧಿಸಿ ಹೊರಡಿಸಲಾಗಿತ್ತು. ಮುಂದುವರೆದು, ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ ಇಡಿ ೨೦ ಕೆವಿವಿ ೨೦೧೯ ದಿನಾಂಕ ೧೦.೦೧.೨೦೨೨ರಲ್ಲಿ ನಿರ್ದೇಶಿಸಿದಂತೆ ಹಾಗೂ ನೇಮಕಾತಿ ಪ್ರಕ್ರಿಯೆಗಳ ಪರಿಶೀಲನಾ ಸಮಿತಿ ವರದಿ ದಿನಾಂಕ ೧೯.೦೩.೨೦೨೨ ಹಾಗೂ ಸರ್ಕಾರದ ದಿನಾಂಕ ೨೪.೦೩.೨೦೨೨ರ ಪತ್ರದಲ್ಲಿನ ತತ್ಪರಿಣಾಮಗಳ ರೀತ್ಯಾ ಘನತವೆತ್ತ ಕುಲಾಧಿಪತಿಗಳು ಹಾಗೂ ರಾಜ್ಯಪಾಲರ ಅನುಮೋದನೆಯ ಷರತ್ತಿಗೊಳಪಟ್ಟು ೨೦೧೮ರಲ್ಲಿ ನೇಮಕಗೊಂಡ ಕೆಳಕಂಡ ಬೋಧಕೇತರ ನೌಕರರ ಸೇವಾಪೂರ್ವ ಅವಧಿ ಪೂರ್ಣಗೊಂಡಿದೆಯೆಂದು ಕಚೇರಿ ಆದೇಶದಲ್ಲಿ ಉಲ್ಲೇಖಿಸಿ ಘೋಷಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿ ಮಂಡಿಸಿದೆ.

೧. ಶ್ರೀ ಹರ್ಷವರ್ಧನ – ಗ್ರಂಥಾಲಯ ಸಹಾಯಕರು
೨. ಶ್ರೀಮತಿ ಮೇಘಾ – ಗ್ರಂಥಾಲಯ ಸಹಾಯಕರು
೩. ಶ್ರೀ ಬೀರಪ್ಪ – ಸಹಾಯಕ ತೋಟಗಾರಿಕಾಧಿಕಾರಿ
೪. ಶ್ರೀ ರಾಘವೇಂದ್ರ – ಶೀಘ್ರಲಿಪಿಗಾರ

**ನಿರ್ಣಯ :** ಸದರಿ ವಿಷಯವನ್ನು ಸಭೆಯು ಸುಧೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ನಿರ್ಣಯಿಸಿತು.

೨೦೧೭–೧೮ನೇ ಸಾಲಿನ ನೇಮಕಾತಿ ಪ್ರಕ್ರಿಯೆಗಳ ಪರಿಶೀಲನಾ ಸಮಿತಿ ವರದಿಯಲ್ಲಿನ ಅಂಶಗಳ ಹಾಗೂ ಸರ್ಕಾರದ ದಿನಾಂಕ ೧೦.೦೧.೨೦೨೨ ಮತ್ತು ೨೪.೦೩.೨೦೨೨ರ ಪತ್ರಗಳಲ್ಲಿನ ಅಂಶಗಳ ತತ್ಪರಿಣಾಮಗಳಿಗೆ ಒಳಪಟ್ಟು ಹಾಗೂ ದಿನಾಂಕ ೨೭.೦೩.೨೦೧೮ರ ಆಯಾ ಅಭ್ಯರ್ಥಿಗಳ ಆದೇಶಗಳ ನೇಮಕಾತಿಗೆ ಘನತೆವೆತ್ತ ರಾಜ್ಯಪಾಲರು ಅನುಮೋದನೆ ನೀಡಿದ ನಂತರದಲ್ಲಷ್ಟೇ ಅಭ್ಯರ್ಥಿಗೆ ಸೇವಾ ಸೌಲಭ್ಯಗಳು ಮತ್ತು ಆರ್ಥಿಕ ಸೌಲಭ್ಯಗಳು ವಿಸ್ತರಿಸಲ್ಪಡುವ ಷರತ್ತಿಗೊಳಪಟ್ಟು, ಕೆಳಕಂಡ ಅಭ್ಯರ್ಥಿಗಳ ಸೇವಾಪೂರ್ವ ಅವಧಿಯು ತೃಪ್ತಿಕರವಾಗಿದೆ ಎಂದು ಘೋಷಿಸಲು ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

೧. ಶ್ರೀ ಹರ್ಷವರ್ಧನ – ಗ್ರಂಥಾಲಯ ಸಹಾಯಕರು
೨. ಶ್ರೀಮತಿ ಮೇಘಾ – ಗ್ರಂಥಾಲಯ ಸಹಾಯಕರು
೩. ಶ್ರೀ ಬೀರಪ್ಪ – ಸಹಾಯಕ ತೋಟಗಾರಿಕಾಧಿಕಾರಿ
೪. ಶ್ರೀ ರಾಘವೇಂದ್ರ – ಶೀಘ್ರಲಿಪಿಗಾರ

೨೧೩.೧೫ ಬೋಧಕ ಸಿಬ್ಬಂದಿಗಳ ಸೇವಾಪೂರ್ವ ಅವಧಿ ಘೋಷಣೆ ಕುರಿತು ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿ.

ಟಿಪ್ಪಣಿ : ೨೦೧೭–೧೮ನೇ ಸಾಲಿನಲ್ಲಿ ೩೭೧(ಜೆ) ಸ್ಥಳೀಯ ವೃಂದದಲ್ಲಿ ನೇಮಕಗೊಂಡ ಬೋಧಕ ಸಿಬ್ಬಂದಿಗಳ ನೇಮಕಾತಿ ಆದೇಶವು **ಸರ್ಕಾರದ ಪತ್ರ ಸಂಖ್ಯೆ ಇಡಿ ೫೭೨ ಯುಎನ್‌ಇ ೨೦೧೪ ದಿನಾಂಕ ೨೭.೦೯.೨೦೧೭ರನ್ವಯ ಕುಲಾಧಿಪತಿಗಳ ಅನುಮೋದನೆ ನಂತರವೇ ಸಿಂಧುಗೊಳ್ಳುವುದು** ಎಂದು ವಿಧಿಸಿ ಹೊರಡಿಸಲಾಗಿತ್ತು. ಮುಂದುವರೆದು, ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ ಇಡಿ ೨೦ ಕೆವಿವಿ ೨೦೧೯ ದಿನಾಂಕ ೧೦.೦೧.೨೦೨೨ರಲ್ಲಿ ನಿರ್ದೇಶಿಸಿದಂತೆ ಹಾಗೂ ನೇಮಕಾತಿ ಪ್ರಕ್ರಿಯೆಗಳ ಪರಿಶೀಲನಾ ಸಮಿತಿ ವರದಿ ದಿನಾಂಕ ೧೯.೦೩.೨೦೨೨ ಹಾಗೂ ಸರ್ಕಾರದ ದಿನಾಂಕ ೨೪.೦೩.೨೦೨೨ರ ಪತ್ರದಲ್ಲಿನ ತತ್ಪರಿಣಾಮಗಳ ರೀತ್ಯಾ ಘನತವೆತ್ತ ಕುಲಾಧಿಪತಿಗಳು ಹಾಗೂ ರಾಜ್ಯಪಾಲರ ಅನುಮೋದನೆಯ ಷರತ್ತಿಗೊಳಪಟ್ಟು ೨೦೧೮ರಲ್ಲಿ ನೇಮಕಗೊಂಡ ಕೆಳಕಂಡ ಬೋಧಕ ನೌಕರರ ಸೇವಾಪೂರ್ವ ಅವಧಿ ಪೂರ್ಣಗೊಂಡಿದೆಯೆಂದು ಕಚೇರಿ ಆದೇಶದಲ್ಲಿ ಉಲ್ಲೇಖಿಸಿ ಘೋಷಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿ ಮಂಡಿಸಿದೆ.

೧. ಡಾ. ವೆಂಕಟಗಿರಿ ದಳವಾಯಿ – ಸಹ ಪ್ರಾಧ್ಯಾಪಕರು
೨. ಡಾ. ಅಮರೇಶ ಯತಗಲ್ – ಸಹ ಪ್ರಾಧ್ಯಾಪಕರು
೩. ಡಾ. ಶಾಂತಪ್ಪ – ಸಹಾಯಕ ಪ್ರಾಧ್ಯಾಪಕರು
೪. ಡಾ. ಎಸ್.ಎ. ಗೋವರ್ಧನ – ಸಹಾಯಕ ಪ್ರಾಧ್ಯಾಪಕರು
೫. ಡಾ. ಗೀತಮ್ಮ ಕೆ. – ಸಹಾಯಕ ಪ್ರಾಧ್ಯಾಪಕರು
೬. ಡಾ. ಯರಿಸ್ವಾಮಿ ಇ. – ಸಹಾಯಕ ಪ್ರಾಧ್ಯಾಪಕರು
೭. ಡಾ. ಗೋವಿಂದ – ಸಹಾಯಕ ಪ್ರಾಧ್ಯಾಪಕರು
೮. ಡಾ. ಮೋಹನ್‌ರಾವ್ ಬಿ. ಪಂಚಾಳ – ಸಹಾಯಕ ಪ್ರಾಧ್ಯಾಪಕರು

ಈ ಮಧ್ಯೆ, ಮೇಲ್ಕಂಡ ಕ್ರಸಂ. ೫ರ ಅಭ್ಯರ್ಥಿ ಡಾ. ಗೀತಮ್ಮ ಅವರನ್ನು ಹೊರತುಪಡಿಸಿ ಉಳಿದ ೭ ಅಭ್ಯರ್ಥಿಗಳು ಕನ್ನಡ ವಿಶ್ವವಿದ್ಯಾಲಯವನ್ನು ಪ್ರತಿವಾದಿಯಾಗಿಸಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ನಂ. ೧೦೦೯೭೯/೨೦೨೨ ಸಲ್ಲಿಸಿದ್ದು, ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ ೧೧.೦೩.೨೦೨೨ರಂದು ಮಧ್ಯಂತರ ಆದೇಶವನ್ನು ಕೆಳಕಂಡಂತೆ ಹೊರಡಿಸಿರುತ್ತದೆ.

**Office objection are kept open.**

**Pending further order, no action detrimental to the petitioners shall be taken by the respondents without express permission of this court.**

ಮೇಲಿನ ಕ್ರಮಸಂಖ್ಯೆ ೪, ೭ ಮತ್ತು ೮ರಲ್ಲಿರುವ ಬೋಧಕ ಸಿಬ್ಬಂದಿಗಳು ನ್ಯಾಯಾಲಯದಲ್ಲಿ ಸಲ್ಲಿಸಿದ ರಿಟ್ ಅರ್ಜಿಯನ್ನು ಮುಂದುವರಿಸುವುದಿಲ್ಲವೆಂದು ಮತ್ತು ಹಿಂಪಡೆಯುವುದಕ್ಕೆ ಅವರ ವಕೀಲರಿಗೆ ತಿಳಿಸಿರುವುದಾಗಿ ದಿನಾಂಕ ೨೩.೦೫.೨೦೨೨ರಂದು ಮಾನ್ಯ ಕುಲಸಚಿವರಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿಯವರ ಮನವಿಗಳನ್ನು ವಿಶ್ವವಿದ್ಯಾಲಯದ ವಕೀಲರ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿದ್ದು, ಮುಂದಿನ ವಿಚಾರಣೆ ದಿನಾಂಕವು ಮಾನ್ಯ ನ್ಯಾಯಾಲಯದಿಂದ ನಿಗದಿಯಾಗದೇ ಇತ್ಯಾರ್ಥಕ್ಕಾಗಿ ಬಾಕಿ ಇರುತ್ತದೆ. ಮಾನ್ಯ ನ್ಯಾಯಾಲಯದಿಂದ ತೀರ್ಮಾನವನ್ನು ನಿರೀಕ್ಷಿಸಲಾಗಿದೆ.

ಈ ಹಂತದಲ್ಲಿ ಬೋಧಕ ಸಿಬ್ಬಂದಿಗಳ ಸೇವಾಪೂರ್ವ ಅವಧಿ ಘೋಷಿಸುವ ಕುರಿತು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿ ಮಂಡಿಸಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ನಿರ್ಣಯಿಸಿತು.

೧. ೨೦೧೭-೧೮ನೇ ಸಾಲಿನ ನೇಮಕಾತಿ ಪ್ರಕ್ರಿಯೆಗಳ ಪರಿಶೀಲನಾ ಸಮಿತಿ ವರದಿಯಲ್ಲಿನ ಅಂಶಗಳ ಹಾಗೂ ಸರ್ಕಾರದ ದಿನಾಂಕ ೧೦.೦೧.೨೦೨೨ ಮತ್ತು ೨೪.೦೩.೨೦೨೨ರ ಪತ್ರಗಳಲ್ಲಿನ ಅಂಶಗಳ ತತ್ಪರಿಣಾಮಗಳಿಗೆ ಒಳಪಟ್ಟು ಹಾಗೂ ದಿನಾಂಕ ೨೭.೦೩.೨೦೧೮ರ ಆಯಾ ಅಭ್ಯರ್ಥಿಗಳ ಆದೇಶಗಳ ನೇಮಕಾತಿಗೆ ಘನತೆವೆತ್ತ ರಾಜ್ಯಪಾಲರು ಅನುಮೋದನೆ ನೀಡಿದ ನಂತರದಲ್ಲಷ್ಟೇ ಅಭ್ಯರ್ಥಿಗೆ ಸೇವಾ ಸೌಲಭ್ಯಗಳು ಮತ್ತು ಆರ್ಥಿಕ ಸೌಲಭ್ಯಗಳು ವಿಸ್ತರಿಸಲ್ಪಡುವ ಷರತ್ತಿಗೊಳಪಟ್ಟು, ಕನ್ನಡ ವಿಶ್ವವಿದ್ಯಾಲಯದ ಸೇವಾ ನಿಯಮಗಳ ನಿಯಮ ೧೫ರಲ್ಲಿ ಪರಿಭಾಷಿಸಿದಂತೆ ಬೋಧಕ ವರ್ಗದ ನೌಕರರ ಸೇವಾಪೂರ್ವ ಅವಧಿ ಘೋಷಣೆಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ಕೆಳಕಂಡ ಅಭ್ಯರ್ಥಿಗಳ ಕ್ರಮಾಂಕ ೧ರ ಅಭ್ಯರ್ಥಿ ಹೊರತುಪಡಿಸಿ ಉಳಿದ ಅಭ್ಯರ್ಥಿಗಳ ಸೇವಾಪೂರ್ವ ಅವಧಿಯು ತೃಪ್ತಿಕರವಾಗಿದೆ ಎಂದು ಘೋಷಿಸಲು ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

೧. ಡಾ. ಶಾಂತಪ್ಪ – ಸಹಾಯಕ ಪ್ರಾಧ್ಯಾಪಕರು (ಘನ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ.)
೨. ಡಾ. ಎಸ್.ಎ. ಗೋವರ್ಧನ – ಸಹಾಯಕ ಪ್ರಾಧ್ಯಾಪಕರು
೩. ಡಾ. ಗೀತಮ್ಮ ಕೆ. – ಸಹಾಯಕ ಪ್ರಾಧ್ಯಾಪಕರು
೪. ಡಾ. ಗೋವಿಂದ – ಸಹಾಯಕ ಪ್ರಾಧ್ಯಾಪಕರು
೫. ಡಾ. ಮೋಹನ್‌ರಾವ್ ಬಿ. ಪಂಚಾಳ – ಸಹಾಯಕ ಪ್ರಾಧ್ಯಾಪಕರು

೨. ೨೦೧೭-೧೮ನೇ ಸಾಲಿನ ನೇಮಕಾತಿ ಪ್ರಕ್ರಿಯೆಗಳ ಪರಿಶೀಲನಾ ಸಮಿತಿ ವರದಿ ರೀತ್ಯಾ ೨೧೨ನೇ ಕಾರ್ಯಕಾರಿ ಸಮಿತಿ ಸಭೆ ನಿರ್ಣಯದಂತೆ, ಕೆಳಕಂಡ ಅಭ್ಯರ್ಥಿಗಳಿಗೆ ಯುಜಿಸಿ ನಿಗದಿಪಡಿಸಿದ ಅರ್ಹತಾದಾಯಕ ಸೇವೆ ಹೊಂದಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ಅವಕಾಶ ನೀಡಿ, ೮ ವರ್ಷಗಳ ನಿರಂತರ ಸೇವೆಯನ್ನು ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿ ಸಲ್ಲಿಸಿರುವುದನ್ನು ರುಜುಪಡಿಸತಕ್ಕ ವೇತನಚೀಟಿ, ವೇತನ ಪ್ರಮಾಣಪತ್ರ, ಆದಾಯ ತೆರಿಗೆ ಪಾವತಿಸಿದ ಬಗ್ಗೆ ನಮೂನೆ ೧೬ ದಾಖಲೆಗಳನ್ನು ಹಾಜರುಪಡಿಸಿದಲ್ಲಿ, ಕನ್ನಡ ವಿಶ್ವವಿದ್ಯಾಲಯದ ಸೇವಾ ನಿಯಮಗಳ ನಿಯಮ ೧೫ರಲ್ಲಿ ಪರಿಭಾಷಿಸಿದಂತೆ ಬೋಧಕ ವರ್ಗದ ನೌಕರರ ಸೇವಾಪೂರ್ವ ಅವಧಿ ಘೋಷಣೆಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ೨೦೧೭-೧೮ನೇ ಸಾಲಿನ ನೇಮಕಾತಿ ಪ್ರಕ್ರಿಯೆಗಳ ಪರಿಶೀಲನಾ ಸಮಿತಿ ವರದಿಯಲ್ಲಿನ ಅಂಶಗಳ ಹಾಗೂ ಸರ್ಕಾರದ ದಿನಾಂಕ ೧೦.೦೧.೨೦೨೨ ಮತ್ತು ೨೪.೦೩.೨೦೨೨ರ ಪತ್ರಗಳಲ್ಲಿನ ಅಂಶಗಳ ತತ್ಪರಿಣಾಮಗಳಿಗೆ ಒಳಪಟ್ಟು ಹಾಗೂ ದಿನಾಂಕ ೨೭.೦೩.೨೦೧೮ರ ಆಯಾ ಅಭ್ಯರ್ಥಿಗಳ ಆದೇಶಗಳ ನೇಮಕಾತಿಗೆ ಘನತೆವೆತ್ತ ರಾಜ್ಯಪಾಲರು ಅನುಮೋದನೆ ನೀಡಿದ ನಂತರದಲ್ಲಷ್ಟೇ ಅಭ್ಯರ್ಥಿಗೆ ಸೇವಾ ಸೌಲಭ್ಯಗಳು ಮತ್ತು ಆರ್ಥಿಕ ಸೌಲಭ್ಯಗಳು ವಿಸ್ತರಿಸಲ್ಪಡುವ ಷರತ್ತಿಗೊಳಪಟ್ಟು, ಕೆಳಕಂಡ ಅಭ್ಯರ್ಥಿಗಳ ಸೇವಾಪೂರ್ವ ಅವಧಿಯು ತೃಪ್ತಿಕರವಾಗಿದೆ ಎಂದು ಘೋಷಿಸಲು ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

೧. ಡಾ. ವೆಂಕಟಗಿರಿ ದಳವಾಯಿ – ಸಹ ಪ್ರಾಧ್ಯಾಪಕರು
೨. ಡಾ. ಅಮರೇಶ ಯತಗಲ್ – ಸಹ ಪ್ರಾಧ್ಯಾಪಕರು

೩. ಪ್ರೊಬೇಷನರಿ ಅವಧಿಯಲ್ಲಿರುವ ಅಭ್ಯರ್ಥಿ ಡಾ. ಈ. ಯರಿಸ್ವಾಮಿ, ಸಹಾಯಕ ಪ್ರಾಧ್ಯಾಪಕರು ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯು ಕಮಲಾಪುರ ಪೊಲೀಸ್ ಠಾಣೆಯಲ್ಲಿ ಬಾಕಿ ಇರುವುದರಿಂದ ಈ ಪ್ರಕರಣದಲ್ಲಿ ಸದರಿಯವರು ದೋಷಮುಕ್ತಗೊಳ್ಳುವವರೆಗೆ ಸೇವಾಪೂರ್ವ ಅವಧಿಯನ್ನು ಘೋಷಿಸದಿರಲು ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

೨೧೩.೧೬ ಡಾ.ಕೆ.ಎಂ. ಮೇತ್ರಿ, ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ ಇವರು ಸಿದ್ಧಪಡಿಸಿ ಸಲ್ಲಿಸಿರುವ ಪ್ರಸ್ತಾವನೆ-ನಾಡೋಜ ಜಾನಪದಶ್ರೀ ಬುರ್ರಕಥಾ ಈರಮ್ಮ ದತ್ತಿನಿಧಿ ಸ್ಥಾಪಿಸುವ ಬಗ್ಗೆ.

ಟಿಪ್ಪಣಿ : ಡಾ.ಕೆ.ಎಂ. ಮೇತ್ರಿ, ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ ಇವರು ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮ-೧೯೯೧ರ ಪರಿನಿಯಮ ೩೩ ಸಿ ಪ್ರಕಾರ ದತ್ತಿನಿಧಿ ಮತ್ತು ಇತರ ಸ್ವೀಕೃತಿಗಳಿಗೆ ಅವಕಾಶವಿರುವುದು ಈ ಹಿನ್ನೆಲೆಯಲ್ಲಿ ಸದರಿಯವರ ಪೋಷಕರಾಗಿದ್ದ ಶ್ರೀ ಬಿ. ನಾರಾಯಣರಾವ್ ಅವರ ನೆನಪಿಗಾಗಿ ೨ ಲಕ್ಷ ರೂಗಳ ಇಡುಗಂಟಿನ ನೊಂದಿಗೆ, ನಾಡೋಜ ಜಾನಪದಶ್ರೀ ಬುರ್ರಕಥಾ ಈರಮ್ಮ ದತ್ತಿನಿಧಿ ಸ್ಥಾಪನೆಗಾಗಿ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ನಾಡೋಜ ಜಾನಪದಶ್ರೀ ಬುರ್ರಕಥಾ ಈರಮ್ಮ ದತ್ತಿನಿಧಿ ಸ್ಥಾಪನೆಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ರೂ. ೨ ಲಕ್ಷಗಳ ಮೊತ್ತವನ್ನು ಬ್ಯಾಂಕ್‌ನಲ್ಲಿ ಠೇವಣಿಯಾಗಿ(ಇಡುಗಂಟು)ಟ್ಟು ಇದರಿಂದ ಬರುವ ಬಡ್ಡಿಹಣದಿಂದ ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಣಯಿಸಿ, ನಿಯಮಾನುಸಾರ ನಾಡೋಜ ಜಾನಪದಶ್ರೀ ಬುರ್ರಕಥಾ ಈರಮ್ಮ ದತ್ತಿನಿಧಿ ಸ್ಥಾಪಿಸುವ ಸಂಬಂಧ ಸೂಕ್ತ ಕ್ರಮಕೈಗೊಳ್ಳಲು ಸಭೆ ಅನುಮೋದನೆ ನೀಡಿತು.

೨೧೩.೧೭ ಚನ್ನಪಟ್ಟಣ ತಾಲೂಕಿನ ಕಣ್ವಮಂಗಳ ಗ್ರಾಮದ ವ್ಯಾಪ್ತಿಯಲ್ಲಿ ಬರುವ ರಸಋಷಿ ಅಂಗ ಸಂಸ್ಥೆಯಾದ ಸಾಧನ ಸಂಗಮ ಟ್ರಸ್ಟ್‌ನ ಮಾನ್ಯತಾ ಪರಿಶೀಲನಾ ಸಮಿತಿ ವರದಿ ಕುರಿತು.

ಟಿಪ್ಪಣಿ : ದಿನಾಂಕ ೧೪.೧೨.೨೦೨೧ರಂದು ಚನ್ನಪಟ್ಟಣ ತಾಲೂಕಿನ ಕಣ್ವಮಂಗಳ ಗ್ರಾಮದ ವ್ಯಾಪ್ತಿಯಲ್ಲಿ ಬರುವ ರಸಋಷಿ ಅಂಗ ಸಂಸ್ಥೆಯಾದ ಸಾಧನ ಸಂಗಮ ಟ್ರಸ್ಟ್‌ನ ಸಂಗೀತ ಮತ್ತು ನೃತ್ಯ ವಿಷಯಗಳ ಪಿಎಚ್.ಡಿ. ಅಧ್ಯಯನಕ್ಕೆ ಮಾನ್ಯತೆ ನೀಡುವ ಸಲುವಾಗಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಪರಿಶೀಲನಾ ಸಮಿತಿಯು ಭೇಟಿ ನೀಡಿ ಸಲ್ಲಿಸಿರುವ ವರದಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ಪರಿಶೀಲನಾ ಸಮಿತಿ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೩.೧೮ ಗಂಗಾವತಿ ಭಾಗ್ಯಮ್ಮ ಗ್ರಾಮೀಣ ಪದವಿ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಕೇಂದ್ರದ ಮಾನ್ಯತಾ ಕೇಂದ್ರ ಪರಿಶೀಲನಾ ಸಮಿತಿ ವರದಿ ಕುರಿತು.

ಟಿಪ್ಪಣಿ : ದಿನಾಂಕ ೧೯.೦೨.೨೦೨೨ರಂದು ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಹೂವಿನಹಡಗಲಿಯಲ್ಲಿರುವ ಗಂಗಾವತಿ ಭಾಗ್ಯಮ್ಮ ಗ್ರಾಮೀಣ ಪದವಿ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಮಾನ್ಯತೆ ನೀಡುವ ಸಲುವಾಗಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಪರಿಶೀಲನಾ ಸಮಿತಿ ಭೇಟಿ ನೀಡಿ ಸಲ್ಲಿಸಿರುವ ವರದಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ಪರಿಶೀಲನಾ ಸಮಿತಿಯ ವರದಿಯನ್ನು ಸಭೆಯು ಪರಿಶೀಲಿಸಿ, ಸಂಬಂಧಪಟ್ಟ ವಿಷಯಗಳಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಿಕೊಂಡಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಮಾನ್ಯತೆ ನೀಡಬಹುದೆಂದು ಸಭೆ ತೀರ್ಮಾನಿಸಿತು.

೨೧೩.೧೯ ದಿನಾಂಕ ೨೯.೦೭.೨೦೨೨ರಂದು ನಡೆದ ಪ್ರಸಾರಾಂಗ ಸಲಹಾ ಸಮಿತಿ ಸಭೆಯ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೩.೨೦ ದಿನಾಂಕ ೨೦.೦೬.೨೦೨೨ರಂದು ನಡೆದ ಕಟ್ಟಡ/ಕಾಮಗಾರಿ ಸಲಹಾ ಸಮಿತಿ ಸಭೆ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೩.೨೧ ದಿನಾಂಕ ೦೪.೦೮.೨೦೨೨ರಂದು ಬೆಳಿಗ್ಗೆ ೧೦.೦೦ ಗಂಟೆಗೆ ನಡೆದ ಕಾಮಗಾರಿ ಪರಿಶೀಲನಾ ಸಮಿತಿ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೩.೨೨ ಕನ್ನಡ ವಿಶ್ವವಿದ್ಯಾಲಯದ ತಾತ್ಕಾಲಿಕ ಸಿಬ್ಬಂದಿಗಳ ವೇತನ ಅನುದಾನದ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ತಾತ್ಕಾಲಿಕ ಸಿಬ್ಬಂದಿಗಳ ವೇತನ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆ ತೀರ್ಮಾನಿಸಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು